ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಸರ್ಕಾರಗಳ ಅಸಹನೆ ಮತ್ತು ದಿಗ್ಬಂಧನ

ಕಳೆದ ಹಲವು ವರ್ಷಗಳಿಂದ ಆಗಾಗ ಸುದ್ದಿಯಲ್ಲಿ ಬರುವ, ಆದರೆ ಯಾವುದೇ ಪರಿಹಾರದತ್ತ ಮುಂದುವರೆಯುತ್ತಿರುವಂತೆ ಕಾಣದ 'ಭೀಮಾ ಕೋರೆಗಾಂವ್' ಎಂದೇ ಪ್ರಚಲಿತವಿರುವ ಘಟನೆಯನ್ನು ನಾವುಗಳು ಗಂಭೀರವಾಗಿ ಪರಿಶೀಲಿಸಿ ನೋಡಬೇಕಾಗಿದೆ. ಯಾವುದೇ ಸರ್ಕಾರ ಭಿನ್ನಮತವನ್ನು ದಮನ ಮಾಡುವ ಪ್ರಯತ್ನ ಮಾಡುತ್ತದೆ ಎನ್ನುವುದು ಅನುಭವದ ಮಾತು. ಸದ್ಯ ಇರುವ ಸರ್ಕಾರ ಭಯೋತ್ಪಾದನೆಗೆ ಸಂಬಂಧಿಸಿದ ಕಾನೂನನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಿದೆ ಎನ್ನುವುದನ್ನು ಕಂಡಿದ್ದೇವೆ. ಆದರೆ ಆ ಕಾನೂನು ರೂಪುಗೊಂಡದ್ದು ಈ ಸರ್ಕಾರದ ಕಾಲದಲ್ಲಲ್ಲ. ಸದ್ಯದ ಸರ್ಕಾರ ಆ ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡಿದೆಯಾದರೂ, ಅದರ ಆತ್ಮ ಇದ್ದದ್ದು ಹಿಂದಿನ ಸರ್ಕಾರ ರೂಪಿಸಿದ್ದ ಕಾನೂನು ನಿಯಮಾವಳಿಯಲ್ಲಿ. ಹೀಗಾಗಿ ನಾವು ಮಾನವಾಧಿಕಾರಗಳನ್ನು ಉಲ್ಲಂಘಿಸಿ ಜನರನ್ನು ದೀರ್ಘಕಾಲದವರೆಗೆ ಬಂಧನದಲ್ಲಿರುವ ಪ್ರಕ್ರಿಯೆಯನ್ನು ಒಂದು ಸರ್ಕಾರ ಅಥವಾ ವಿಚಾರವಾದದ ಫಲಿತವಾಗಿ ನೋಡದೇ, ಅಧಿಕಾರ ಮತ್ತು ಮಾನವಾಧಿಕಾರದ ನಡುವಿನ ಘರ್ಷಣೆಯಾಗಿ ಕಾಣಬೇಕು. ಇದು ಹೀಗಿದ್ದರೂ, ಪ್ರಸ್ತುತ ಸರ್ಕಾರದಡಿ ಒಂದು ವ್ಯವಸ್ಥಿತ ಪಿತೂರಿಯೆಂದು ವರ್ಣಿಸಲಾದ ಭೀಮಾ ಕೋರೆಗಾಂವ್ ಘಟನಾವಳಿಯನ್ನು ಮಾನವಾಧಿಕಾರದ ನೆಲೆಯಲ್ಲಿ ಪರೀಕ್ಷಿಸಿ ನೋಡುವುದು ಮುಖ್ಯವಾಗುತ್ತದೆ.

ಜಾಮೀನು ಸಿಗುವುದು ಸಾಧ್ಯವೇ ಇಲ್ಲದಂತಹ ತೀವ್ರವಾದಿಗಳ ಮೇಲೆ ಉಪಯೋಗಿಸುವ ಕಾನೂನನ್ನು ಮಾನವಾಧಿಕಾರಗಳ ಪರವಾಗಿ ಕೆಲಸ ಮಾಡುವ ಜನರ ಮೇಲೆ ಉಪಯೋಗಿಸುವುದು ದುಃಖದ ಮಾತೇ ಸರಿ. ಮಾನವಾಧಿಕಾರದ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಆ್ಯಕ್ಟಿವಿಸ್ಟುಗಳ ಬಗ್ಗೆ ಸರ್ಕಾರಗಳಿಗೆ ಅಸಹನೆ ಏಕಿರಬಹುದು?

ಅಲ್ಪಾ ಷಾ ಕೀನ್ಯಾದಲ್ಲಿ ಹುಟ್ಟಿ, ಬ್ರಿಟನ್ನಿನಲ್ಲಿ ಉನ್ನತ ವ್ಯಾಸಂಗ ಮಾಡಿ ಅಲ್ಲಿಯೇ 'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್'ನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಮಾನವಶಾಸ್ತ್ರದ ಪರಿಣಿತಿ ಪಡೆದಿರುವ ಅಲ್ಪಾ, ಈ ಹಿಂದೆ ನಕ್ಸಲ್‌ವಾದಿಗಳ ಗೆರಿಲ್ಲಾ ತಂಡಗಳ ಜೊತೆ ಕಾಲಕಳೆದು 'ನೈಟ್‌ಮಾರ್ಚ್' ಎನ್ನುವ ಪುಸ್ತಕ ಬರೆದಿದ್ದಾರೆ. ಎಡಪಂಥೀಯರ ಮತ್ತು ನಕ್ಸಲ್ ವಿಚಾರವಾದವನ್ನು ಪ್ರತಿಪಾದಿಸುವ ಗುಂಪುಗಳ ವಿಧಿವಿಧಾನಗಳ ಬಗ್ಗೆ ಹತ್ತಿರದಿಂದ ಆಕೆ ನೋಡಿದ್ದಾರೆ. ಬಿಬಿಸಿ ಮತ್ತು ರೇಡಿಯೋ 4ರಲ್ಲಿ ಅಲ್ಪಾ